

ಎಡದಿಂದ ಬಲಕ್ಕೆ:

1. ವ್ಯಾಪಾರವನ್ನು ಕೈ ಬಿಟ್ಟು ಅಡವಿಗೆ ಹೋದನೇ? 3
3. ಭೈರವನ ಹೆಸರಲ್ಲಿ ಭಾರೀ ಯುದ್ಧ 3
4. ಯಾವನಿಗೂ ತಿಳಿಯಲೇ ಇಲ್ಲ, ಆಕೆ ಅನ್ಯದೇಶೀಯ ಮಹಿಳೆ 3
6. ತಂಗುದಾಣದ ಅಲಂಕರಣಕ್ಕೆ ನಕ್ಷತ್ರ ಗುಂಪು 4
7. ಮೂರ್ಖರಂತೆ ನಟಿಸಿ ಕದ್ದಿದ್ದು ರತ್ನಮಣಿ ಹೌದೇ? 4
9. ಮಂದಾಕಿನಿಯ ಕೈ ತುಂಬ ನೈದಿಲೆ ಕುಸುಮ 4
11. ಕರುವನ್ನು ಕೊಂಡು ತಂದ ತಾರೀಕನ್ನು ಕುರಿತು ಇದೆಂಥ ಆಕ್ಷೇಪ? 4
15. ಹರುಕು ತೊಟ್ಟವರನ್ನು ಕಂಡು ಏಕೆ ಈ ವ್ಯಂಗ್ಯ? 3
16. ಕೆಲಸ ಮಾಡುವವರ ಕೈಯಲ್ಲಿ ಶಿವನ ವಾದ್ಯ ಹೇಗೆ? 3
17. ತಿಜೋರಿಯಲ್ಲಿ ಬಚ್ಚಿಟ್ಟಿದ್ದು ಯಾವುದೀ ಲೋಹ? 3

ಮೇಲಿಂದ ಕೆಳಕ್ಕೆ:

1. ಒರಳಿನ ಉಪಯೋಗ ಈಗ ಬಹಳ ಅಪರೂಪ 3
2. ಅಲ್ಲಿ ನಡೆದ ಅನ್ಯಾಯವನ್ನು ಕಂಡದ್ದು ಇದೇ ಕಣ್ಣು 3
3. ಬೆಳಗಾದೊಡನೆ ಹಾಜರು, ಆತನ ನೆಂಟರಿಷ್ಟರ ಗುಂಪು 3
5. ನಿಷ್ಠಾವಂತರ ಜೊತೆಗೂ ಆತನ ನಡೆನುಡಿ ಒರಟು, ಕಟ್ಟುನಿಟ್ಟು 3
6. ತರ್ಕ ಮಂಡನೆಗೆ ನಿಗದಿಯಾದ ದಿನಾಂಕ ಹೇಗೆ? 3
8. ಉದ್ದ ತೋಳು ಇರುವವರಿಗಷ್ಟೇ ಎಟುಕಬಹುದು ಇಂಥ ಚಿಗುರು 3
10. ಮುದುಕರಾದಮೇಲೂ ಕಡಿಮೆಯಾಗಿಲ್ಲ ಗರ್ವ, ದರ್ಪ 3
12. ಸಕ್ಕರೆ ಬೆರೆಸಿ ಸೇವಿಸಿದರೂ ಇದರ ರುಚಿ ಒಗರು 3
13. ಬೆಂಕಿ ಆರಿಸಲೂ ಕಲಿತಿಲ್ಲ, ಪೆದ್ದ 3
14. ಆ ಕಟ್ಟಡಕ್ಕೆ ಸಂಬಂಧಿಸಿದ ಕಾಗದ ಪತ್ರಗಳ ಕಟ್ಟು ಗೊತ್ತೇ? 3

---

## 21-3-2019 ಉತ್ತರಗಳು

ಎಡದಿಂದ ಬಲಕ್ಕೆ:

1. ಸಮ್ಮೋಹ 3. ಬೇಸರ 4. ನುಣುಪು 6. ಕುಸುಮ 7. ಹರಿದಿನ 9. ಪಾರುಪತ್ಯ 11. ಆನಾತ್ಕರ (ರಕ್ತನಾಳ ಹಿಂದುಮುಂದು) 13. ರಸಾತಲ 15. ಪಾತಕ 17. ವಿಸ್ಮಯ 18. ಲಾಲಸ 19. ಸಹಾಯ

ಮೇಲಿಂದ ಕೆಳಕ್ಕೆ:

1. ಸರಕು 2. ಹನುಮ 3. ಬೇಗುದಿ 5. ಪುಕಾರು 7. ಹರತಾಳ 8. ನಷ್ಟಕರ 9. ಪಾಲುದಾರ 10. ತ್ಯಕ್ತಕಾಲ 12. 'ಕ್ತರವಿ' (ವಿರಕ್ತ ತಲೆಕೆಳಗು) 14. ಸಾಹಸ 15. ಪಾಯಸ 16. ಕಲಾಯಿ

ಪ್ರಶ್ನಾ ಂಕಣ

# ನೀಲಿ ತಿಮಿಂಗಿಲ: ಏನೇನು ದಾಖಲೆ?

ನೀಲಿ ತಿಮಿಂಗಿಲ: ಸ್ತನಿ ವರ್ಗಕ್ಕೆ (ಸಸ್ತನಿ ಅಲ್ಲ) ಸೇರಿರುವ ಈ ಸಾಗರ ಜೀವಿ ವಾಸ್ತವವಾಗಿ ಪ್ರಾಣಿ ಲೋಕದ 'ತ್ರಿವಿಕ್ರಮ'! ಶರೀರದ ಮತ್ತು ಶರೀರದ ಅಂಗಾಂಗಗಳ ಗಾತ್ರ, ತೂಕಗಳಲ್ಲಿ ಮತ್ತು ಆಹಾರ ಸೇವನೆಯ ಪ್ರಮಾಣದಲ್ಲಿ ಈ ಪ್ರಾಣಿ ಕಲ್ಪನಾತೀತ ಅಳತೆಗಳ ವಿಶ್ವ ದಾಖಲೆಗಳನ್ನು ಸ್ಥಾಪಿಸಿದೆ. ದೇಹದ ಮೇಲ್ಭಾಗವೆಲ್ಲ ಕಂದು ಮಿಶ್ರಿತ ನೀಲಿ ಬಣ್ಣದ್ದಾಗಿದ್ದು, ತಳಭಾಗ ಅಂತಹದೇ ತಿಳಿ ವರ್ಣದ್ದಾಗಿ, ಹಾಗಾಗಿ ನೀಲಿ ತಿಮಿಂಗಿಲ ಎಂಬ ಅಭಿಧಾನ ಪಡೆದಿರುವ ಈ ಅತ್ಯದ್ಭುತ ಪ್ರಾಣಿಯ (ಚಿತ್ರ 3) ಆಯ್ದ ಕೆಲವು ಪರಮ ವಿಸ್ಮಯದ ದಾಖಲೆಗಳು.

* ಇಡೀ ತಿಮಿಂಗಿಲ ವರ್ಗದಲ್ಲಿ ಮಾತ್ರವಲ್ಲದೆ ಇಡೀ ಪ್ರಾಣಿ ವರ್ಗದಲ್ಲೇ ನೀಲಿ ತಿಮಿಂಗಿಲದ್ದು ಗರಿಷ್ಠ ಉದ್ದ, ತೂಕ ಮತ್ತು ಗಾತ್ರ (ಚಿತ್ರ 1ರಲ್ಲಿ ಬಾಣದ ಗುರುತು ಸೂಚಿಸುತ್ತಿರುವ ಪ್ರಭೇದ). ವಯಸ್ಕ ಗಂಡು ತಿಮಿಂಗಿಲಗಳ ಉದ್ದ ಒಂದು ನೂರು ಅಡಿ! ಎಂದರೆ ಸಾಧಾರಣ ಉದ್ದದ ಹತ್ತು ಕಾರುಗಳು ಒಂದರ ಹಿಂದೆ ಮತ್ತೊಂದು ಸಾಲಾಗಿ ನಿಂತಷ್ಟು ಉದ್ದ! ಶರೀರ ತೂಕ ಎರಡು ನೂರು ಟನ್ ! ಎಂದರೆ 40 ವಯಸ್ಕ ಆನೆಗಳ ಒಟ್ಟು ತೂಕದಷ್ಟು! (ಮನುಷ್ಯರಿಗೆ ಹೋಲಿಸಿದ ಗಾತ್ರವನ್ನು ಚಿತ್ರ 2 ರಲ್ಲಿ ಗಮನಿಸಿ).

* ನೀಲಿ ತಿಮಿಂಗಿಲದ ಹೃದಯದ ತೂಕ 180 ಕಿಲೋ! ಇದು ಆನೆಯೊಂದರ ಹೃದಯದ 14 ಮಡಿ ತೂಕಕ್ಕೆ ಸಮ. ಪ್ರಧಾನ ರಕ್ತನಾಳಗಳ ವ್ಯಾಸ ಒಂಬತ್ತು ಅಂಗುಲ! ನಿಮಿಷಕ್ಕೆ ಹತ್ತೇ ಬಾರಿ ಮಿಡಿಯುವ ಹೃದಯದ್ದು ಕಡಲಲ್ಲಿ ಎರಡು ಕಿಲೋ ಮೀಟರ್ ದೂರಕ್ಕೆ ಕೇಳಿಸುವಂಥ ಶಬ್ದ! ನೀಲಿ ತಿಮಿಂಗಿಲದ ಶ್ವಾಸಕೋಶಗಳದು ಒಮ್ಮೆಗೆ 5000 ಲೀಟರ್ ಗಾಳಿಯನ್ನು ಎಳೆದುಕೊಳ್ಳಬಲ್ಲ ಸಾಮರ್ಥ್ಯ (ಇದೇ ಸಾಮರ್ಥ್ಯ ಮನುಷ್ಯರಲ್ಲಿ 6 ಲೀಟರ್)! ಈ ಪ್ರಾಣಿ ಪ್ರತಿ ಬಾರಿ ಉಸಿರನ್ನು ಹೊರಬಿಡುವಾಗಲೂ ಮೂಗಿನಿಂದ ಚಿಮ್ಮುವ ನೀರಿನ ಕಾರಂಜಿಯ ಎತ್ತರ 40 ಅಡಿ!





* ನೀಲಿ ತಿಮಿಂಗಿಲದ ಚರ್ಮದ ( ಕೆಳಗಿನ ಕೊಬ್ಬಿನ ಪದರವೂ ಸೇರಿ) ದಪ್ಪ ಒಂದು ಅಡಿ! ಇಷ್ಟು ದಪ್ಪದ ಕೊಬ್ಬಿನ ಪದರದಿಂದಾಗಿಯೇ ಈ ಪರಮ ದೈತ್ಯ ಕಡಲಲ್ಲಿ ತೇಲಬಲ್ಲದು. ನೀಲಿ ತಿಮಿಂಗಿಲಗಳು ಈಜುವ ಗರಿಷ್ಠ ವೇಗ ತಾಸಿಗೆ 50 ಕಿ.ಮೀ.

* ಈ ಪ್ರಾಣಿಯ ಆಹಾರ ಸಾಗರದ ಜಲದಲ್ಲಿ ಅಪಾರ ಪ್ರಮಾಣದಲ್ಲಿರುವ ಸೂಕ್ಷ್ಮ ಪ್ರಾಣಿಗಳಾದ 'ಪ್ಲಾಂಕ್ಟನ್'ಗಳು. ಕ್ರಿಲ್, ಕೋಪೆಪಾಡ್ ಇತ್ಯಾದಿ ಇಂಥ ಪ್ರಾಣಿಗಳನ್ನು ಬಾಯ್ದೆರೆದು, ನೀರಿನೊಡನೆ ಒಳಸೆಳೆದು, ಸೋಸಿ ಪಡೆದು ನುಂಗುವ ಆಹಾರ ಸೇವನಾ ಕ್ರಮ. ಪ್ರತಿ ದಿನ ಹೀಗೆ ಸೇವಿಸುವ ಒಟ್ಟು ಆಹಾರ 36 ಟನ್! ನೀಲಿ ತಿಮಿಂಗಿಲದ ನಾಲಿಗೆಯ ತೂಕವೇ 3 ಟನ್!

* ಹುಟ್ಟುವಾಗಲೇ ನೀಲಿ ತಿಮಿಂಗಿಲದ ಮರಿಯ ತೂಕ 3 ಟನ್ ; ಉದ್ದ 25 ಅಡಿ! ಶೇಕಡ 50 ರಷ್ಟು ಕೊಬ್ಬಿನಂಶ ಇರುವ ತಾಯಿ ಹಾಲನ್ನು (ಹಸುವಿನ ಹಾಲಿನ ಕೊಬ್ಬಿನಂಶ ಶೇ.3.5) ದಿನಕ್ಕೆ 500 ಲೀಟರ್ ನಷ್ಟು ಕುಡಿಯುವ ಮರಿಯ ತೂಕ ದಿನದಿಂದ ದಿನಕ್ಕೆ 90 ಕಿಲೋ ಗ್ರಾಂ ಹೆಚ್ಚುತ್ತದೆ! ನಂಬಲಾಗದ ದಾಖಲೆಗಳು ಅಲ್ಲವೇ?

■ ಎನ್. ವಾಸುದೇವ್